**OS 32- 2018 further cross of PW 2.doc**

ಪಿ ಡಬ್ಲ್ಯೂ ಃ **2 -**

ಸಾಕ್ಷಿಗೆ ದಿನಾಂಕಃ **23.01.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿಗಳು ಪರ: ವಕೀಲರ ಮೂಲಕ ಃ

ನಾನು **9** ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮತ್ತು ವಾದಿಯ ನಡುವೆ ಯಾವ ರೀತಿ ಪರಿಚಯ ಎಂದರೆ **4** ಕಿ.ಮೀ. ಅಂತರದಲ್ಲಿ ಅವರ ಮನೆ ಇರುತ್ತದೆ. ವಾದಿಯು ನನಗೆ **20** ವರ್ಷಗಳ ಹಿಂದಿನಿಂದಲು ಪರಿಚಯ ಇರುತ್ತಾರೆ. ವಾದಿಯು ವ್ಯವಸಾಯ ವೃತ್ತಿಯನ್ನು ಮಾಡುತ್ತಾರೆ. ವಾದಿಯು ಲೇವಾದೇವಿ ಮಾಡುವುದಿಲ್ಲ. ವಾದಿಯು ಕರಾರು ಪತ್ರಗಳನ್ನು ಬರೆಸಿಕೊಂಡು ಅದರ ಆಧಾರದ ಮೇಲೆ ಸಾಲ ನೀಡುವ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ನಡುವೆ ಹಣಕಾಸಿನ ವ್ಯವಹಾರ ಇರುವುದಿಲ್ಲ. ಕ್ರಯದ ಮಾತುಕತೆ ಆಗುವ ಕಾಲಕ್ಕೆ ನಾನು ಸಹ ಸ್ಥಳಕ್ಕೆ ಹೋಗಿರುತ್ತೇನೆ. **13.08.2015** ರಂದು ಆ ರೀತಿ ಮಾತುಕತೆ ಆಗಿರುತ್ತದೆ. ಸದರಿ ಮಾತುಕತೆ ಕಾಲಕ್ಕೆ ಪ್ರತಿವಾದಿ **1** ಮತ್ತು **4** ರವರು ಬಂದಿದ್ದರು. ಸರ್ವೆ ನಂ. **74/1** ಬಿ ರ **31** ಗುಂಟೆಗೆ ಮಾತುಕತೆಯಾಗಿರುತ್ತದೆ. ಒಟ್ಟು **5,50,000/-** ರೂಗಳಿಗೆ ಕ್ರಯದ ಮಾತುಕತೆ ಆಗಿರುತ್ತದೆ. ಗುಂಟೆಗೆ ಎಷ್ಟು ಮೊತ್ತ ಎಂದು ಆ ದಿನ ಮಾತುಕತೆ ಆಗಿರುವುದಿಲ್ಲ. ಕ್ರಯದ ಮಾತುಕತೆ ಆದಾಗ ಮೇಲೆ ಹೇಳಿದ ವ್ಯಕ್ತಿಗಳು, ವಾದಿ ಮತ್ತು ಇನ್ನಿಬ್ಬರು ವ್ಯಕ್ತಿಗಳು ಇದ್ದರು. ಸದರಿ ಇನ್ನಿಬ್ಬರು ಎಂದು ಹೇಳುವ ವ್ಯಕ್ತಿಗಳು ಅದೇ ಗ್ರಾಮದವರಾಗಿದ್ದು, ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತನ್ನು ನಾನು ನೋಡಿರುತ್ತೇನೆ. ಅಲ್ಲಿ ಹುರುಳಿ ಮತ್ತು ರಾಗಿಯನ್ನು ಬೆಳೆಯುತ್ತಾರೆ.

**2.** ನಾನು ನಿಪಿ**1** ಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ. ಸದರಿ ಪತ್ರವನ್ನು ತಯಾರು ಮಾಡಿದವರ ಹೆಸರು ನನಗೆ ಗೊತ್ತಿರುವುದಿಲ್ಲ. ಸದರಿ ಪತ್ರವನ್ನು ವಾದಿ, ಪ್ರತಿವಾದಿಗಳು ಮತ್ತು ನಾನು ಬರೆಸಿರುತ್ತೇವೆ. ಅದನ್ನು ತಯಾರು ಮಾಡಿಸಲು ಒಕ್ಕಣೆಯನ್ನು **1** ನೇ ಪ್ರತಿವಾದಿಯು ಹೇಳಿರುತ್ತಾರೆ. ಸದರಿ ಪತ್ರವು ಬೆರಳಚ್ಚು ರೂಪದಲ್ಲಿ ಇತ್ತು. ಮಳವಳ್ಳಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಅದನ್ನು ಬೆರಳಚ್ಚು ಮಾಡಿಸಲಾಗಿತ್ತು. ಅದು ಎಷ್ಟು ಪುಟಗಳನ್ನು ಒಳಗೊಂಡಿತ್ತು ಎಂದು ನಾನು ನೋಡಿರುವುದಿಲ್ಲ. ಸದರಿ ಪತ್ರಕ್ಕೆ ಮೊದಲು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. **5** ಲಕ್ಷ ರೂಪಾಯಿಗಳನ್ನು ನಗದು ರೂಪದಲ್ಲಿ ಕೊಟ್ಟಿರುತ್ತಾರೆ. ಅದು **500** ರೂಪಾಯಿ ಮುಖ ಬೆಲೆಯನ್ನು ಹೊಂದಿತ್ತು. **500** ರೂಪಾಯಿ ಮುಖ ಬೆಲೆಯ **10** ಕಟ್ಟುಗಳ ನೋಟುಗಳು ಇದ್ದವು. ನಾನು ಅದನ್ನು ಲೆಕ್ಕ ಮಾಡಿರುವುದಿಲ್ಲ. ವಾದಿಯು ಸದರಿ ಮೊತ್ತವನ್ನು ತನ್ನ ಮಗನಿಂದ ಪಡೆದು ಮತ್ತು ವ್ಯವಸಾಯದ ಹಣವನ್ನು ನೀಡಿರುತ್ತಾರೆ. ನಾನು **3-4** ಬಾರಿ ಈ ದಾವೆಯಲ್ಲಿ ಸಾಕ್ಷ್ಯ

ನುಡಿಯಲು ಬಂದಿರುತ್ತೇನೆ. ನಾನು ವ್ಯವಸಾಯ ವೃತ್ತಿಯನ್ನು ಮಾಡುತ್ತೇನೆ. ನಾನು ಸಾಕ್ಷ್ಯ ನುಡಿಯಲು ಬಂದರೆ ನನಗೆ ಊಟ ತಿಂಡಿ ವಾದಿಯು ಕೊಡಿಸಬೇಕು ಎಂದರೆ ಕಾಫಿಯನ್ನೂ ಸಹ ಕೊಡಿಸಿರುವುದಿಲ್ಲ. ನನಗೆ ಮತ್ತು ವಾದಿಗೆ ಹಣಕಾಸಿನ ವ್ಯವಹಾರ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. **1** ನೇ ಪ್ರತಿವಾದಿಯು ದಾವಾಸ್ವತ್ತನ್ನು ಕ್ರಯಕ್ಕೆ ಕೊಡುವುದಾಗಿ ಹೇಳಲು ವಾದಿಯ ಮನೆಗೆ ಬಂದಿದ್ದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಭದ್ರುತೆಗಾಗಿ ಬರೆದುಕೊಟ್ಟ ಪತ್ರುಕ್ಕೆ ಸಂಬಂಧವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವ್ಯವಹಾರದ ಬಗ್ಗೆ ಗೊತ್ತಿಲ್ಲದೇ ಇದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವ್ಯವಹಾರ ಗೊತ್ತಿಲ್ಲದೇ ಇದ್ದ ಕಾರಣ ನಿಪಿ **1** ಕ್ಕೆ ನಾನು ಸ ಹಿ ಮಾಡಿಲ್ಲ ಎಂದರೆ ನಾನು ಬಂದ ದಿನದಂದು ನೊಂದಣಿ ಆಗಿರುವುದಿಲ್ಲ ಮರುದಿನ ಆಗಿರುತ್ತದೆ. ನಾನು ವಾದಿಯ ಇತರೆ ದಾಖಲೆಗಳಲ್ಲಿ ಸಹ ಸಹಿ ಮಾಡಿ, ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರಗಳು ಗೊತ್ತಿಲ್ಲದೇ ಇದ್ದರೂ ಸಹ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.